752(191) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರಿನ ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ದುರುಪಯೋಗವಾಗುತ್ತಿರುವ ಬಗ್ಗೆ ಕ್ರಮಕೈಗೊಳ್ಳಲು ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರಿಂದ ಆದೇಶ ಸರ್ಕಾರಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಬಂದಿರುವ ಒಂದು ಮನವಿಯನ್ನು ಸೂಕ್ತವಾಗಿ ಪರಿಗಣಿಸಲು ಸರ್ಕಾರಕ್ಕೆ ಸೂಚನೆ ನೀಡಲಾಗಿರುತ್ತದೆ.

ಆ) ಈ ಬಗ್ಗೆ ಕ್ರೀಡಾ ಆಯುಕ್ತರಿಂದ ವರದಿಯನ್ನು ಕೋರಲಾಗಿದ್ದು ವರದಿ ಸ್ವೀಕೃತವಾದ ನಂತರ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಪರಿಶೀಲಿಸಲಾಗುವುದು.

753(195) ಶ್ರೀಕಟ್ಟಾ ಸುಬ್ರಮಣ್ಯನಾಯ್ಡು(ಶಿವಾಜಿನಗರ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ ಇಲ್ಲಿಯವರೆಗೆ ಈ ಕೇಂದ್ರಗಳಲ್ಲಿ ವಿವಿಧ ಹುದ್ದೆಗಳಿಗೆ ನೋಂದಣಿ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು ?

ಆ) 2004 ನೇ ಜನವರಿಯಿಂದ ಡಿಸೆಂಬರ್‌ವರೆಗೆ ಈ ಕೇಂದ್ರಗಳಿಂದ ನಿರುದ್ಯೋಗಿಗಳಿಗೆ ನೀಡಿದ ಉದ್ಯೋಗವೆಷ್ಟು ?

ಇ) ತಲಾ 100 ರೂ. ವಸೂಲು ಮಾಡಿ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ಬೆಂಗಳೂರಿನಲ್ಲಿ ಆನ್‌ಲೈನ್ 'ಕಂಪು' ಯೋಜನೆಯನ್ನು ಸರ್ಕಾರ ಯಾವಾಗ ಜಾರಿಗೆ ತಂದಿತು ;

ಈ) ಎಷ್ಟು ಜನ ನಿರುದ್ಯೋಗಿಗಳಿಂದ ಯಾವ ಯಾವ ಖಾಸಗಿ ಸಂಸ್ಥೆಗಳು ತಲಾ 100ರೂ ವಸೂಲು ಮಾಡಿದೆ ;

ಉ) 100 ರೂ. ನೀಡಿ ನೋಂದಣಿ ಮಾಡಿದವರಿಗೆ ಉದ್ಯೋಗ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಈ 'ಕಂಪು' ಯೋಜನೆ ಸ್ಥಗಿತಗೊಳಿಸಲಾಗಿದೆಯೇ ಹಾಗೂ ಬೆಂಗಳೂರು ನಗರದಲ್ಲಿರತಕ್ಕ ಉದ್ಯೋಗ ವಿನಿಮಯ ಕೇಂದ್ರಗಳನ್ನು ಉದ್ಯೋಗ ಪಾರ್ಕ್‌ಗಳನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ 5. 31–12–2004 ರವರೆಗೆ 3,76,153 ಅಭ್ಯರ್ಥಿಗಳನ್ನು ನೊಂದಾಯಿಸಲಾಗಿದೆ.

ಆ) 472

ಇ) ದಿನಾಂಕ : 03–05–2003ರಿಂದ ಜಾರಿಗೆ ತಂದಿದೆ.

ಈ) 'ಕಂಪು' ಯೋಜನೆಗೆ ಸಂಬಂಧಿಸಿದ ಖಾಸಗಿ ಸಂಸ್ಥೆಯನ್ನು ಹೊರತುಪಡಿಸಿ ಬೇರೆ ಯಾವುದೇ ಖಾಸಗಿ ಸಂಸ್ಥೆಯಿಂದ ತಲಾ 100 ರೂಪಾಯಿ ವಸೂಲು ಮಾಡಿರುವುದಿಲ್ಲ. ದಿನಾಂಕ :24–04–2004ಕ್ಕೆ 15.218 ನಿರುದ್ಯೋಗಿಗಳಿಂದ ವಸೂಲು ಮಾಡಲಾಗಿದೆ.

ಉ) ಬಂದಿದೆ

ಊ) 'ಕಂಪು' ಯೋಜನೆಯನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ(ತಾಂತ್ರಿಕ), ಬೆಂಗಳೂರು ವಿಶಿಷ್ಠ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿ ಬೆಂಗಳೂರು ಮತ್ತು ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮೈಸೂರು ಇವುಗಳನ್ನು ಉದ್ಯೋಗ ಪಾರ್ಕ್‌ಗಳನ್ನಾಗಿ ಪರಿವರ್ತಿಸಲು ಸರ್ಕಾರ ಆದೇಶ ಸಂಖ್ಯೆ:ಎಲ್ ಡಿ 55 ಇಟಿಎಕ್ಸ್ 2004 ದಿನಾಂಕ : 21–9–2004ರಲ್ಲಿ ಆದೇಶ ಹೊರಡಿಸಿದೆ.

754(200) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಖಾಲಿ ಇರತಕ್ಕ ತಹಶೀಲ್ದಾರ್ ಹುದ್ದೆಗಳ ಸಂಖ್ಯೆ ಎಷ್ಟು ;

ಆ) ಈ ಹುದ್ದೆಗಳನ್ನು ಸರ್ಕಾರವೇ ನೇರವಾಗಿ ನೇಮಕಾತಿ ಮಾಡಿ ಭರ್ತಿ ಮಾಡಲು ನಿರ್ಧರಿಸಿದೆಯೇ ;

ಇ) ಹಾಗಿದ್ದಲ್ಲಿ ಈ ನೇಮಕಾತಿಗಾಗಿ ಪಾಲಿಸಲಿರುವ ನೀತಿ ನಿಯಮಗಳೇನು;

ಈ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಈ ನೇಮಕಾತಿಗಳನ್ನು ಮಾಡಿಕೊಳ್ಳದೇ ಇರಲು ಕಾರಣಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 170

ಆ) ಇಲ್ಲಿಯವರೆಗೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕಾತಿ ಆಗುತ್ತಿತ್ತು–ವಿಳಂಬವಾಗಿರುವುದರಿಂದ, ಸರ್ಕಾರ ನೇರ ನೇಮಕಾತಿಯ ಬಗ್ಗೆ ಕ್ರಮ ಕೈಗೊಳ್ಳುತ್ತಿದೆ.

ಇ) ವಿಶೇಷ ನಿಯಮಗಳನ್ನು ರಚಿಸಲಾಗುವುದು

ಈ) ಅತೀ ವಿಳಂಬ ಮತ್ತು ಇತರೇ ಸಮಸ್ಯೆಗಳು.

755(202) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸಂಚರಿಸುವ ವಾಹನಗಳ ಸಂಖ್ಯೆ 21 ಲಕ್ಷಕ್ಕೂ ಮೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೆಂಗಳೂರು ನಗರದಲ್ಲಿ ಹೆಚ್ಚಿನ ವಾಹನ ಸಂಚಾರದಿಂದ, ವಾಯು ಮಾಲಿನ್ಯ ಉಂಟಾಗಿ ವಾಹನ ಹೊರಸೂಸುವ ಹೊಗೆಯಿಂದ ಮಕ್ಕಳು ನಾನಾ ಖಾಯಿಲೆಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;